# ಸಾಂಸ್ಕೃತಿಕ ಹೆಜ್ಜೆಗುರುತು

ಪಂಡಿತ ತಾರಾನಾಥರು ತುಂಗಭದ್ರಾದಲ್ಲಿ ಸ್ಥಾಪಿಸಿದ ಆಶ್ರಮ 'ಪ್ರೇಮಾಯತನ'ಕ್ಕೆ ನೂರು ವರ್ಷಗಳು ತುಂಬಿವೆ. 1921ರಲ್ಲಿ ಆರಂಭವಾದ ಈ ಆಶ್ರಮ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮುಖ್ಯವಾದದ್ದು. ಅದು ಸಾಹಿತ್ಯ ಮಾತ್ರವಲ್ಲದೇ ಸಂಗೀತ, ಅಧ್ಯಾತ್ಮ, ವೈದ್ಯಕೀಯ ರಂಗಗಳಲ್ಲಿ ಮಾಡಿದ ತನ್ನದೇ ಆದ ಪ್ರಯೋಗಗಳಿಂದ ಸಹೃದಯರ ಗಮನಸೆಳೆದಿದೆ. ಈ ಆಶ್ರಮ ದಕ್ಷಿಣ ಭಾರತದ ಸಾಂಸ್ಕೃತಿಕ ಹೆಜ್ಜೆ ಗುರುತುಗಳಲ್ಲಿ ಒಂದು. ಇಂತಹ ಅನೇಕ ಸಾಂಸ್ಕೃತಿಕ ಗುರುತುಗಳು ಕರ್ನಾಟಕದಲ್ಲಿವೆ.

'ಪ್ರೇಮಾಯತನ' ಆಶ್ರಮವನ್ನು ಸ್ಥಾಪಿಸಿ ಮತ್ತು ಅದರ ಹಿಂದಿನ ಶಕ್ತಿಯಾಗಿ ಇದ್ದವರು ಲೇಖಕ, ಸಂಗೀತಗಾರ, ವೈದ್ಯ, ಪತ್ರಕರ್ತರಾದ ಪಂಡಿತ ತಾರಾನಾಥರು. ಸರ್ವಜನಾಂಗದ ಶಾಂತಿಯ ತೋಟವಾದ 'ಪ್ರೇಮಾಯತನ'ದ ಕೊಡುಗೆ ಎದ್ದು ಕಾಣುವಂತಹದ್ದು ಮತ್ತು ಇಂದಿಗೆ ಮಾತ್ರವಲ್ಲ ನಾಳೆಗೂ ಬೇಕಾದದ್ದು. ತಾರಾನಾಥರಂತಹ ಕನಸುಗಾರರ ಮುಂಗಾಣ್ಕೆಯನ್ನು ತೋರುವಂತಹದ್ದೂ ಆಗಿದೆ. ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ ಇಂತಹ ಸಾಂಸ್ಕೃತಿಕ ಹೆಗ್ಗುರುತುಗಳು ಕರ್ನಾಟಕದ ಅನನ್ಯತೆಯನ್ನು ಎತ್ತಿ ಹಿಡಿದಿವೆ. 'ಪ್ರೇಮಾಯತನ'ವು ಹೆಸರಿಗೆ ತಕ್ಕಂತೆ ಪ್ರೀತಿಯನ್ನೇ ಹಂಚುವ, ಬಿತ್ತುವ ಆಶ್ರಮ. ಅಲ್ಲಿ ಎಲ್ಲ ವರ್ಗದ ಜನರಿಗೆ ತೆರೆದ ಬಾಹುವಿನ, ಅಂತಃಕರಣದ ಸ್ವಾಗತವಿದೆ. ತಾರಾನಾಥರ ಬಹುಮುಖ ಪ್ರತಿಭೆ, ಆಸಕ್ತಿ, ಜೀವಪರ ವ್ಯಕ್ತಿತ್ವದ ಫಲವಾಗಿ ಬೆಳೆದು ನಿಂತಿರುವ ಈ ಆಶ್ರಮ, ನಮ್ಮ ಸಮಾಜದಲ್ಲಿ ಪ್ರತಿದಿನ ಕಾಣಿಸಿಕೊಳ್ಳುವ ಹಲವು ರೋಗಗಳಿಗೆ ಮದ್ದಾಗುವಂತಿದೆ. ರಹಮತ್ ತರೀಕೆರೆ ಅವರು ಈ ಆಶ್ರಮ ಮತ್ತು ತಾರಾನಾಥರ ಕುರಿತಂತೆ ಬರೆದಿರುವ 'ಪ್ರೇಮಾಯತನ: ಕರ್ನಾಟಕದ ಸಾಬರಮತಿ' ವಿಶೇಷ ಲೇಖನ ಸೌಹಾರ್ದ ಕರ್ನಾಟಕದ ಮಣ್ಣಿನ ವಿಶಿಷ್ಟ ಗುಣವನ್ನು ದಾಖಲಿಸಿದೆ. ಇದು ಈ ಸಂಚಿಕೆಯ ವಿಶೇಷ ಬರಹವಾಗಿದೆ.

ಮೆಕ್ಸಿಕೊ ಕವಿ ಅಕ್ಟೇವಿಯಾ ಪಾಜ್ ಸಂದರ್ಶನ ಈ ಸಂಚಿಕೆಯಲ್ಲಿದೆ. 'ಸಾಮಾಜಿಕ ನ್ಯಾಯವಿಲ್ಲದ ಸಮಾಜ ಒಳ್ಳೆಯ ಸಮಾಜವಲ್ಲ. ಅದೇ ರೀತಿ ಕಾವ್ಯವಿಲ್ಲದ ಸಮಾಜ ಕನಸುಗಳಿಲ್ಲದ, ಶಬ್ದಗಳಿಲ್ಲದ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ವ್ಯಕ್ತಿಗಳ ನಡುವೆ, ಕಾವ್ಯದ ನಡುವೆ ಸೇತುವೆ ಇಲ್ಲದ ಸಮಾಜ ಒಳ್ಳೆಯ ಸಮಾಜವಲ್ಲ. ನಾವು ಇತರ ಪ್ರಾಣಿಗಳಿಗಿಂತ ಭಿನ್ನವಾಗಿದ್ದೇವೆ. ಏಕೆಂದರೆ, ನಾವು ಮಾತಾಡಬಲ್ಲೆವು. ಭಾಷೆಯ ಅತ್ಯುನ್ನತ ರೂಪ ಕಾವ್ಯ. ಸಮಾಜವು ಕಾವ್ಯವನ್ನು ನಾಶಮಾಡಿದರೆ ಅದು ತನ್ನ ಆತ್ಮವನ್ನೇ ಕೊಂದುಕೊಂಡಂತೆ' ಎಂದು ಪಾಜ್ ತಮ್ಮ ಸಂದರ್ಶನದಲ್ಲಿ ಹೇಳಿದ್ದಾರೆ. ಈ ಮಾತುಗಳು ನಮ್ಮ ವರ್ತಮಾನಕ್ಕೆ ಅನ್ವಯವಾಗುವಂತೆಯೇ, ಎಲ್ಲ ಕಾಲಕ್ಕೂ ಸಲ್ಲುವ ಮಾತುಗಳೂ ಆಗಿವೆ. ಕವಿಯೊಬ್ಬನ ಮಾತುಗಳು ತನ್ನ ಕಾಲವನ್ನೂ ಮೀರಿ ಎಲ್ಲರನ್ನೂ ಮುಟ್ಟುವುದು ಹೀಗೆಯೇ.

ಭಿನ್ನ ಧಾಟಿ, ಶೈಲಿಯ ಪ್ರಬಂಧಗಳನ್ನು ಈ ಸಂಚಿಕೆ ಒಳಗೊಂಡಿದೆ. ಅವು ಓದುಗರ ಬುದ್ಧಿ–ಭಾವವನ್ನು ತಾಕಬಲ್ಲ ಬರಹಗಳಾಗಿವೆ. ಇವುಗಳೊಂದಿಗೆ ಪ್ರಕಟಗೊಂಡಿರುವ, ಮನುಷ್ಯನ ಬದುಕು–ಸ್ವಭಾವವನ್ನು ದಟ್ಟವಾಗಿ ಚಿತ್ರಿಸುವ ಕತೆಗಳು ಹಾಗೂ ಲವಲವಿಕೆಯ ಅಂಕಣ ಬರಹಗಳು ಓದಿನ ರುಚಿಯನ್ನು ಹೆಚ್ಚಿಸಬಲ್ಲವು, ವಿಸ್ತರಿಸಬಲ್ಲವು.

**ಮಯೂರ ಬಳಗ**